**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ.ನಾರಾಯಣಸ್ವಾಮಿ ರವರು ನಿಯಮ 330 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿರವರ ಹೇಳಿಕೆ**

ವಿಷಯ: ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕ್ಕೆ ಸರ್ಕಾರಿ ವಕೀಲರನ್ನು ನೇಮಿಸುವಾಗ ಯಾವುದೇ ಅರ್ಹತಾ ಪರೀಕ್ಷೆ ಇಲ್ಲದೆ, ಯಾವುದೇ ಮಾನದಂಡಗಳನ್ನು ರೂಪಿಸದೇ ಹಾಗೂ ಅನುಸರಿಸದೇ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಮೇಲ್ಕಂಡ ಸಂಸ್ಥೆಗಳಿಗೆ ನ್ಯಾಯಾಲಯಗಳಲ್ಲಿ ಬಹಳ ಹಿನ್ನಡೆಯಾಗುತ್ತಿರುವ ವಿಚಾರದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

***

ಉತ್ತರ : ಮಾನ್ಯ ನ್ಯಾಯಾಲಯಗಳಲ್ಲಿ ಪ್ರಾಧಿಕಾರದ ವಿರುದ್ಧ ದಾಖಲಾಗುವ ವ್ಯಾಜ್ಯಗಳನ್ನು ನಿರ್ವಹಣೆ ಮಾಡಲು ಖಾಸಗಿ ವಕೀಲರನ್ನು ನಿಗದಿತ ವೃತ್ತಿ ಶುಲ್ಕದಡಿಯಲ್ಲಿ ಪ್ರಾಧಿಕಾರದ ಕಾನೂನು ತಂಡದಲ್ಲಿ (Panel of Advocate) ಸೇರಿಸಿಕೊಳ್ಳಲಾಗುತ್ತಿದೆ. ಇಂತಹ ವಕೀಲರನ್ನು ಕಾನೂನು ತಂಡದಲ್ಲಿ ಸೇರಿಸಿಕೊಳ್ಳುವ ಪೂರ್ವದಲ್ಲಿ ಯಾವುದೇ ಅರ್ಹತಾ ಲಿಖಿತ ಪರೀಕ್ಷೆ ಇರುವುದಿಲ್ಲ ಹಾಗೂ ಇಂತಹ ವಕೀಲರನ್ನು ನೇಮಿಸುವಾಗ ಅವರ ವಿದ್ಯಾರ್ಹತೆಗೆ ತಕ್ಕಂತೆ ಹಾಗೂ ಕನಿಷ್ಠ 7 ರಿಂದ 8 ವರ್ಷಗಳ ವೃತ್ತಿ ಅನುಭವ ಮತ್ತು ಸೇವಾ ಹಿರಿತನವನ್ನು ಆಧರಿಸಿ ಪ್ರಾಧಿಕಾರದ ಕಾನೂನು ತಂಡದಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಕೆಲವು ಸರ್ಕಾರಿ ವಕೀಲರು ಸಹ ಈ ಕಾನೂನು ತಂಡದಲ್ಲಿ ಇರುತ್ತಾರೆ. ಕಾನೂನು ತಂಡದಲ್ಲಿರುವ ಈ ವಕೀಲರುಗಳು ಪ್ರಾಧಿಕಾರದ ವಿರುದ್ಧ ದಾಖಲಾಗುವ ಪ್ರಕರಣಗಳಲ್ಲಿ ಖಾಸಗಿಯಾಗಿ ಪ್ರತಿನಿಧಿಸಲು ನಿರ್ಬಂಧ ಹೇರಲಾಗಿದೆ.

ಈ ವಕೀಲರುಗಳ ಕಾರ್ಯನಿರ್ವಹಣೆಯ ಬಗ್ಗೆ ಆಗಾಗ್ಗೆ ಪ್ರಾಧಿಕಾರದ ಹಂತದಲ್ಲಿ ಅವಲೋಕಿಸಲಾಗುತ್ತಿದೆ. ಪ್ರತಿನಿತ್ಯ ಕೆಲವೊಂದು ಪ್ರಮುಖ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಪ್ರಾಧಿಕಾರದ ಕಾನೂನು ಅಧಿಕಾರಿಗಳು ಸಹ ಹಾಜರಿದ್ದು ಪ್ರಾಧಿಕಾರದ ವಕೀಲರು ಸಲ್ಲಿಸುವ ವಾದಗಳನ್ನು ಹಾಗೂ ವಕೀಲರ ಕಾರ್ಯಕ್ಷಮತೆಯನ್ನು ಅವಲೋಕಿಸುತ್ತಾರೆ. ಪ್ರಾಧಿಕಾರದ ಹಿತಾಸಕ್ತಿಗೆ ಅರ್ಹರಲ್ಲದ ವಕೀಲರನ್ನು ಆಗಿಂದಾಗ್ಗೆ ಗುರುತಿಸಿ ಪ್ರಾಧಿಕಾರದ ವಕೀಲರ ತಂಡದಿಂದ ಇವರುಗಳನ್ನು ಕೈಬಿಡಲಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ ಸುಮಾರು 50 ರಿಂದ 60 ಜನ ವಕೀಲರನ್ನು ತಂಡದಿಂದ ಕೈಬಿಡಲು ಈಗಾಗಲೇ ಪ್ರಾಧಿಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ ಹಾಗೂ ಪ್ರಾಧಿಕಾರದ ವಕೀಲರ ತಂಡವನ್ನು ಬಲವರ್ಧನೆ ಮಾಡಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳಲಾಗುತ್ತಿದ್ದು, ನುರಿತ ವಕೀಲರನ್ನು ಮಾತ್ರ ತಂಡದಲ್ಲಿ ಸೇರ್ಪಡೆ ಮಾಡಲು ಕ್ರಮಕೈಗೊಳ್ಳಲಾಗುವುದು ಹಾಗೂ ಪ್ರಾಧಿಕಾರದ ನ್ಯಾಯಾಲಯದ ಪ್ರಕರಣಗಳನ್ನು ನಿರ್ವಹಿಸುವ ಬಗ್ಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಆಲೋಚಿಸಲಾಗುತ್ತಿದೆ. ಕೆಲವೊಂದು ಕಾನೂನು ಅಂಶಗಳನ್ನು ಒಳಗೊಂಡ ಪ್ರಕರಣಗಳಲ್ಲಿ ಪ್ರಾಧಿಕಾರದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಹಿರಿಯ ವಕೀಲರ ಸೇವೆಯನ್ನು ಪಡೆದುಕೊಳ್ಳಲಾಗುತ್ತಿದೆ. ಪ್ರಾಧಿಕಾರದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಾಧಿಕಾರದ ವಕೀಲರ ಕಡೆಯಿಂದ ಯಾವುದೇ ಹಿನ್ನಡೆಯಾಗದಂತೆ ಪ್ರಕರಣಗಳನ್ನು ನಿರ್ವಹಣೆ ಮಾಡುವ ಬಗ್ಗೆ ಹೆಚ್ಚಿನ ಗಮನಹರಿಸಲಾಗಿದೆ ಹಾಗೂ ನಿಗಾ ಇಡಲಾಗಿರುತ್ತದೆ.

---

**ಸಂಖ್ಯೆ: ನಅಇ 12 ಬೆಂಭೂಸ್ವಾ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ